ಪ್ರಾಥಮಿಕ ಆರೋಗ್ಯ ಕೇಂದ್ರ, ಉಳ್ಳಾಲ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಎರಡು ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದೆ. ಮೂರನೇ ಹುದ್ದೆ ಈ ಹಿಂದೆ ಮಂಜೂರು ಆಗಿದ್ದು ಅದನ್ನು ಸಮುದಾಯ ಆರೋಗ್ಯ ಮಾರ್ಗದರ್ಶಿ ಹುದ್ದೆ ಅದನ್ನು ಈಗ ವಜಾ ಮಾಡಲಾಗಿದೆ. ಪುರುಷ ವೈದ್ಯರು ಅಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಮಹಿಳಾ ವೈದ್ಯರುಗಳ ಹುದ್ದೆ ಖಾಲಿ ಇತ್ತು. ಆಯ್ಕೆಗೊಂಡ ವೈದ್ಯರ ಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ದಿನಾಂಕ:2-2-91ರಂದು ಪಡೆಯಲಾಗಿದೆ. ಮುಖ್ಯ ಆಯ್ಕೆಪಟ್ಟಿಯಲ್ಲಿ 82 ಮಹಿಳಾ ವೈದ್ಯರು ಮತ್ತು ಹೆಚ್ಚಿನ ಆಯ್ಕೆಪಟ್ಟಿಯಲ್ಲಿ 36ಮಹಿಳಾ ವೈದ್ಯರುಗಳು ಆಯ್ಕೆಯಾಗಿದ್ದಾರೆ. ಪೊಲೀಸ್ ವೆರಿಫಿಕೇಷನ್ ಮತ್ತು ವೈದ್ಯಕೀಯ ತಪಾಸಣೆ ಆದಕೂಡಲೇ ಒಬ್ಬ ಮಹಿಳಾ ವೈದ್ಯಾಧಿಕಾರಿಯನ್ನು ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆದ್ಯತೆಮೇರೆಗೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಔಷಧಿಗಾಗಿ ರೂ.30,000 (ಮೂವತ್ತು ಸಾವಿರ) ರೂಪಾಯಿ ಅನುದಾನ ಇದ್ದು ಹಿಂದಿನ ವರ್ಷ ಮತ್ತು ಈ ವರ್ಷವೂ ಕೂಡಾ ಈಗಾಗಲೇ ಜಿಲ್ಲಾ ಪರಿಷತ್ತಿನ ಮತಿಯಿಂದ ಒದಗಿಸಲಾಗಿದೆ.

9) ಮೂಡಿಗೆರೆ ತಾಲ್ಲೂಕಿನ ಆರೋಗ್ಯ ಇಲಾಖೆಯ ಕಟ್ಟಡಗಳ ದುರಸ್ಥಿ

ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನ ಬಹುತೇಕ ಆರೋಗ್ಯ ಇಲಾಖೆಯ ಕಟ್ಟಡಗಳು ನಾದುರಸ್ಥಿಯಲ್ಲಿದ್ದು, ಈ ಸಾರಿ ಭಾರೀ ಮಳೆಯಿಂದಾಗಿ ಬಹಳ ಶಿಥಿಲವಾಗಿದ್ದು, ಜಾವಳಿ ಆಸ್ಪತ್ರೆಯ ಕಟ್ಟಡ, ಬಾಳಿಹೊಳೆ ಆಸ್ಪತ್ರೆ ಕಟ್ಟಡ, ದಾದದಳ್ಳಿ ಆಸ್ಪತ್ರೆ ಕಟ್ಟಡ ಯಾವಾಗ ಡಾಕ್ಟರ್ ಹಾಗೂ ಅಲ್ಲಿನ ಸಿಬ್ಬಂದಿಯ ತಲೆಮೇಲೆ ಬೀಳುತ್ತದೆಯೋ ಗೊತ್ತಿಲ್ಲ. ಹಾಗೆಯೇ ಸಿಬ್ಬಂದಿ ವರ್ಗದವರ ಕ್ವಾರ್ಟರ್ಸ್‌ಗಳು ಸಹಾ ವಾಸಮಾಡಲು ಯೋಗ್ಯವಾಗಿಲ್ಲ, ಗೋಡೆಗಳು ಬಿದ್ದುಹೋಗಿರುತ್ತವೆ, ಮತ್ತು ಸೋರುತ್ತಿದೆ. ಸುಣ್ಣ ಬಣ್ಣ ಹೊಡದು ಹತ್ತಾರು ವರ್ಷಗಳಾಗಿರುತ್ತವೆ. ಈ ಪರಿಸ್ಥಿತಿ ಇಡೀ ಆರೋಗ್ಯ ಇಲಾಖೆಗೆ ಅವಮಾನಕರ. ಆದುದರಿಂದ ದಯಮಾಡಿ ಮುಂದಿನ ಮಳೆಗಾಲ ಪ್ರಾರಂಭವಾಗುವ ಮೊದಲೇ ಇಲಾಖೆಯ ಒಟ್ಟು ಉಳಿತಾಯ ಹಣದಲ್ಲಿ ಸ್ಪೆಷಲ್ ಆಗಿ ಮೂಡಿಗೆರೆ ತಾಲ್ಲೂಕಿಗೆ ಹಣಕೊಟ್ಟು ಆರೋಗ್ಯ ಇಲಾಖೆಯ ಕಟ್ಟಡಗಳನ್ನು ರಿಪೇರಿ ಮಾಡಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ವಿದ್ಯಾ ಸಚಿವರು): ಮಾನ್ಯ ಅಧ್ಯಕ್ಷರೇ, ಆರೋಗ್ಯ ಸಚಿವರ ಪರವಾಗಿ ನಾನು ಈ ಹೇಳಿಕೆಯನು ಕೊಡಲಿಕ್ಕೆ ಅನುಮತಿಯನ್ನು ಕೇಳುತ್ತಿದ್ದೇನೆ.

ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನವರು ಈ 90-91ನೆಯ ಆರ್ಥಿಕ ಸಾಲಿಗೆ ಆರೋಗ್ಯ ಇಲಾಖೆಯ ಕಟ್ಟಡಗಳ ಮಾರ್ಪಾಡು ಮತ್ತು ಹೆಚ್ಚುವರಿ ಪೂರೈಕೆಗೆ ವಾರ್ಷಿಕ ಯೋಜನೆಯಲ್ಲಿ ಆರ್ಥಿಕ ಅನುದಾನವನ್ನು ಒದಗಿಸಿರುವುದಿಲ್ಲ. ಆದ್ದರಿಂದ ಈ ಕಾಮಗಾರಿಗಳನ್ನು (ದುರಸ್ಥಿ ಸೇರಿ) ಪೂರೈಸಲು ಸಾಧ್ಯವಾಗಿಲ್ಲ. ಮುಂದಿನ ಆರ್ಥಿಕ ಸಾಲಿನಲ್ಲಿ ಈ ಬಗ್ಗೆ ವಿಶೇಷ ಗಮನಹರಿಸಲು ಚಿಕ್ಕಮಗಳೂರು ಜಿಲ್ಲಾ ಪರಿಷತ್ತುಗಳಿಗೆ ಸೂಚನೆ ಕೊಡಲಾಗುವುದು.

ಈ ಕಟ್ಟಡಗಳ ದುರಸ್ಥಿಗಾಗಿ, ಜಿಲ್ಲಾಪರಿಷತ್, ಚಿಕ್ಕಮಗಳೂರು ಇವರ ಇಂಜಿನಿಯರಿಂಗ್ ವಿಭಾಗದಿಂದ ಮಾಹಿತಿ ತರಿಸಿ ಇದಕ್ಕೆ ಅನುಗುಣವಾಗಿ ಆದ್ಯತೆಯಮೇಲೆ ಈ ಕೆಲಸಗಳನ್ನು ಮಳೆಗಾಲಕ್ಕೆ ಮುಂಚಿತವಾಗಿ ಪೂರೈಸಲು ಸೂಚನೆ ಕೊಡಲಾಗುವುದು.